ರಾಜ್ಯದ ನಗರಸಭೆ-ಪುರಸಭೆಗಳ ಕುರಿತು

391- ಶ್ರೀ ಕಟ್ಟ ಸುಬ್ರಮ್ಯನಾಯ್ಡು (ಶಿವಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಒಟ್ಟು ಎಷ್ಟು ನಗರಸಭೆಗಳು / ಪುರಸಭೆಗಳು ಹಾಗೂ ಪಟ್ಟಣ ಪಂಚಾಯತಿಗಳು ಇವೆ.*

ಆ) *ನಗರಸಭೆಗಳು / ಪುರಸಭೆಗಳು ಹಾಗೂ ಪಟ್ಟಣ ಪಂಚಾಯ್ತಿಗಳನ್ನು ಎಷ್ಟು ಜನಸಂಖ್ಯೆ ಆಧಾರದ ಮೇಲೆ ರಚಿಸಲಾಗುವುದು.*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 40 ನಗರಸಭೆಗಳು 82 ಪುರಸಭೆಗಳು ಮತ್ತು 88 ಪಟ್ಟಣ ಪಂಚಾಯತಿಗಳು ಇವೆ.

ಆ) ಈ ಕೆಳಕಂಡಂತೆ ಜನಸಂಖ್ಯೆ ಆಧಾರದ ಮೇಲೆ ನಗರಸಭೆ / ಪಟ್ಟಣ ಪಂಚಾಯತಿಗಳನ್ನು ರಚಿಸಲಾಗಿದೆ.

1. ನಗರಸಭೆಗೆ 50,000 ಜನಸಂಖ್ಯೆ ಕಡಿಮೆಯಿಲ್ಲದೆ 3,00,000 ಜನಸಂಖ್ಯೆ ಮೀರದಂತೆ.
2. ಪುರಸಭೆಗಳಿಗೆ 20,000 ಜನಸಂಖ್ಯೆ ಕಡಿಮೆಯಿಲ್ಲದೆ 50,000 ಜನಸಂಖ್ಯೆ ಮೀರದಂತೆ.
3. ಪಟ್ಟಣ ಪಂಚಾಯ್ತಿಗಳಿಗೆ ಜನಸಂಖ್ಯೆ 10,000 ಕಡಿಮೆ ಇಲ್ಲದಂತೆ 20,000 ಮೀರದಂತೆ.

ಕೈಗಾರಿಕೆಗಳಲ್ಲಿನ ಕಾರ್ಮಿಕ ವೇತನ

392 - ಶ್ರೀ ಕಟ್ಟ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ನೊಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ ಎಷ್ಟು? ಕಳೆದ 3 ವರ್ಷಗಳ ವಿವರಗಳನ್ನು ಜಿಲ್ಲಾವಾರು ಮಾಹಿತಿಯೊಂದಿಗೆ ನೀಡುವುದು?*

ಆ) *ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು? ಅವರ ವೇತನದ ವಿವರಗಳನ್ನು ನೀಡುವುದು?*

ಇ) *ಕಳೆದ 3 ವರ್ಷಗಳಲ್ಲಿ ಕೆ.ಎಸ್.ಎಫ್.ಸಿ. ಹಣಕಾಸು ಸಂಸ್ಥೆ ಕೈಗಾರಿಕೆಗಳಿಗೆ ಬಂಡವಾಳದ ಹೂಡಿಕೆಯಾಗಿ ವಿತರಿಸಿರುವ ಸಾಲದ ಮೊತ್ತ ಎಷ್ಟು?*

ಶ್ರೀ ಎಸ್.ಆರ್. ಕಾಶಪ್ಪನವರ್(ಸಣ್ಣ ಕೈಗಾರಿಕಾ ಸಚಿವರು) :

ಅ) 2.48 ಲಕ್ಷ ಸಣ್ಣ ಕೈಗಾರಿಕೆಗಳು (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ 14.86 ಲಕ್ಷ ಕಾರ್ಮಿಕರು ಉದ್ಯೋಗದಲ್ಲಿದ್ದಾರೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ವೇತನದ ವಿವರಗಳನ್ನು ಇಟ್ಟಿರುವುದಿಲ್ಲ.

ಇ) ವಿವರಗಳು ಕೆಳಕಂಡಂತಿದೆ.

ವರ್ಷ	ವಿತರಿಸಲಾದ ಸಾಲದ ಮೊತ್ತ (ರೂ. ಕೋಟಿಗಳಲ್ಲಿ)
1996-97	309
1997-98	244
1998-99	167

ANNEXURE - I

Statement showing the SSI Regi. Dist. wise for 97-98, 98-99 & 99-2000(upto january 2000)

Sl. No.	Name of the Districts	97-98	98-99	Units upto Jan. 2000
1	2	3	4	5
1.	Bangalore (U)	3480	2416	2334
2.	Belgaum	4856	1342	912
3.	Bellary	1973	581	398
4.	Bijapur	854	334	258
5.	Bidar	1002	300	295
6.	Chickmagalur	347	250	190
7.	Chitradurga	888	300	218
8.	Kodagu	268	249	117
9.	Dharwad	2242	808	631
10.	Gulbarga	2483	422	325
11.	Hassan	1650	461	351
12.	Karwar (D.K)	1421	394	244

1	2	3	4	5
13.	Mangalore (D.K)	1867	757	579
14.	Kolar	1628	529	501
15.	Mandya	897	460	312
16.	Mysore	3327	1051	834
17.	Raichur	1432	502	316
18.	Shimoga	1509	501	378
19.	Tumkur	946	942	748
20.	Bangalore (R)	1332	853	719
21.	Bagalkote	-	-	217
22.	Chamarajanagar	-	-	169
23.	Davanagere	-	-	268
24.	Gadag	-	-	253
25.	Haveri	-	-	145
26.	Koppal	-	-	99
27.	Udupi	-	-	285
	Total	**34402**	**13422**	**12096**

ಸ್ವಯಂ ಉದ್ಯೋಗ ಯೋಜನೆಯ ನಿರುದ್ಯೋಗಿಗಳು

393 - ಶ್ರೀ ಕಟ್ಟ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರದಿಂದ ಜಾರಿಗೆ ತಂದಿರುವ ಸ್ವಯಂ ಉದ್ಯೋಗ ಯೋಜನೆಯ ವಿವರ ಮತ್ತು ಇದರ ಪ್ರಯೋಜನ ವಿವರ ಮತ್ತು ಇದರ ಪ್ರಯೋಜನ ಪಡೆದ ನಿರುದ್ಯೋಗಿಗಳ ವಿವರ ನೀಡುವುದು?*

ಆ) *ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಮೀಸಲಿಟ್ಟಿರುವ ಆಯವ್ಯಯದ ಪೂರ್ಣ ವಿವರಗಳನ್ನು ನೀಡುವುದು?*

ಇ) *2000-2001ನೇ ಸಾಲಿನ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯ ಯೋಜನೆಗಳೇನು, ವಿವರ ನೀಡುವುದು?*